**O.S.No. 91/2018**

ಪಿಡಬ್ಲ್ಯು-2

**ಹೆಸರುಃ ನಾಗಪ್ಪ ಮರಿಬಸಣ್ಣನವರ ಬಿನ್ ಭರಮಪ್ಪ ಮರಿಬಸಣ್ಣನವರ್**

ದಿಃ **06-01-2025** ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು ಃ ಪ್ರತಿವಾದಿಗಳ ಪರ ಶ್ರೀ ಐ.ಜಿ ವಕೀಲರಿಂದ**

1. ಇತರೇ ವಾದಿಗಳ ಪರವಾಗಿ ಸಾಕ್ಷಿ ನುಡಿಯಲು ನನಗೆ ಫವರ್ ಅಫ್ ಆರ್ಟನರಿಯನ್ನು ಕೊಟ್ಟಿರುತ್ತಾರೆ. ಸದರಿ ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ. ನಮ್ಮ ಕುಟುಂಬದ ಮೂಲಪುರುಷ ಫಕೀರಪ್ಪನವರ ಹೆಸರಿನಲ್ಲಿ ಪಹಣಿ ಇದ್ದ ಬಗ್ಗೆ ನನಗೆ ತಿಳಿದಿರುತ್ತದೆ. ನಾವು ಸದರಿ ಫಕೀರಪ್ಪನವರ ಹೆಸರಿನಲ್ಲಿದ್ದ ಪಹಣಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಸರ್ವೇ ನಂಬರ 101 ರ ಒಟ್ಟು 18 ಎಕರೆ 16 ಗುಂಟೆ ಸ್ವತ್ತಿನ ಪಹಣಿಯು ಫಕೀರಪ್ಪನವರ ಹೆಸರಿನಲ್ಲಿತ್ತು. ಸರ್ವೇ ನಂಬರ 80 ರಲ್ಲಿ ಒಟ್ಟು 4 1/2 ಎಕರೆ ಪಹಣಿಯು ಸಹಾ ಫಕೀರಪ್ಪನವರ ಹೆಸರಿನಲ್ಲಿತ್ತು. ಫಕೀರಪ್ಪನವರ ಹೆಸರಿನಲ್ಲಿ ಯಾವುದೇ ಮನೆ ಇರುವುದಿಲ್ಲ. ಸರ್ವೇ ನಂಬರ 101 ಮತ್ತು 80 ರ ಸ್ವತ್ತು ಗಳನ್ನು ಹೊರತುಪಡಿಸಿ ಬೇರೆ ಯಾವುದೇ ಸ್ವತ್ತುಗಳು ಫಕೀರಪ್ಪನವರ ಹೆಸರಿನಲ್ಲಿ ಇರುವುದಿಲ್ಲ.

2. ನಾನು ಫಕೀರಪ್ಪನವರನ್ನು ನೋಡಿರುವುದಿಲ್ಲ. ಆತನು ಸುಮಾರು ವರ್ಷಗಳ ಹಿಂದೆ ಮೃತಪಟ್ಟಿದ್ದು ನಾನು ಆಗ ಹುಟ್ಟಿದ್ದೆ. ಫಕೀರಪ್ಪನವರಿಗೆ ಒಟ್ಟು 4 ಜನ ಗಂಡು ಮಕ್ಕಳು. ಫಕೀರಪ್ಪವರ ಮರಣಾ ನಂತರ ಆ ಆಸ್ತಿಗಳನ್ನು ಅವರ 4 ಜನ ಮಕ್ಕಳು ಪಾಲವಿಭಾಗ ಮಾಡಿಕೊಂಡಿರುತ್ತಾರೆ. ನನ್ನ ಅಜ್ಜ ಫಕೀರಪ್ಪ ಮೃತಪಟ್ಟ ನಂತರ ನನ್ನ ತಂದೆಗೆ ಒಟ್ಟು 4 ಎಕರೆ 24

ಗುಂಟೆ ಆಸ್ತಿ ಬಂದಿತ್ತು. 4 ಎಕರೆ 24 ಗುಂಟೆ ಆಸ್ತಿಯ ಪಹಣಿಯನ್ನು ನನ್ನ ತಂದೆಯು ತನ್ನ ಹೆಸರಿನಲ್ಲಿ ಮಾಡಿಕೊಂಡಿದ್ದರು. ನನ್ನ ತಂದೆಯ ಹೆಸರಿನಲ್ಲಿದಂತಹ ಪಹಣಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ. ನನ್ನ ತಂದೆ ಮತ್ತು ಆತನ ಸಹೋದರರ ನಡುವೆ ಪಾಲುವಿಭಾಗವಾದಾಗ ನನಗೆ ಸುಮಾರು 8-10 ವರ್ಷಗಳಿದ್ದರಬಹುದು.

3. ಪ್ರತಿವಾದಿಗಳು ದಾವೆಗೆ ಸಂಬಂಧಿಸಿದಂತೆ ಹಾಜರುಪಡಿಸಿದಂತಹ ದಾಖಲಾತಿಗಳ ಬಗ್ಗೆ ನನಗೆ ತಿಳಿದಿರುತ್ತದೆ. ನಾವು ಒಟ್ಟು 5 ಜನ ಅಣ್ಣ – ತಮ್ಮಂದಿರು. ನಮ್ಮ 5 ಜನ ಅಣ್ಣ ತಮ್ಮಂದಿರ ನಡುವೆ ಪಾಲುವಿಭಾಗವಾಗಿರುತ್ತದೆ ಹಾಗೂ ಪಹಣಿ ದಾಖಲಾತಿಗಳು ನಮ್ಮ ಹೆಸರಿನಲ್ಲಿ ಆಗಿರುತ್ತವೆ. ನನ್ನ ಹೆಸರಿನಲ್ಲಿ ಪ್ರತ್ಯೇಕವಾಗಿ ಹಿಸ್ಸಾವನ್ನು ಪಹಣಿ ದಾಖಲಾತಿಯಲ್ಲಿ ತೋರಿಸಲಾಗಿರುತ್ತದೆ. ನಾನು ವೈಯಕ್ತಿಕವಾಗಿ ನನ್ನ ಹೆಸರಿನಲ್ಲಿರುವ ಸ್ವತ್ತಿನ ಮೇಲೆ ಸಾಲವನ್ನು ಪಡೆದುಕೊಂಡಿರುತ್ತೇನೆ. ನನ್ನ ಸ್ವತ್ತಿನ ಚೆಕ್ಕಬಂದಿಯೂ ಪೂರ್ವಕ್ಕೆ ಕನಕಪ್ಪ ಹೊಸಕೇರಿರವರ ಜಮೀನು, ಪಶ್ಚಿಮಕ್ಕೆ ಚನ್ನಬಸಪ್ಪನವರ ಜಮೀನು, ಉತ್ತರಕ್ಕೆ ದೊಡ್ಡಬಸಪ್ಪ ಕಾಡಪ್ಪ ರವರ ಜಮೀನು ಮತ್ತು ದಕ್ಷಿಣಕ್ಕೆ ಶಿವರಾಮಪ್ಪ ತಿಗರಿ ರವರ ಜಮೀನು ಇರುತ್ತದೆ.

4. ಪ್ರತಿವಾದಿಗಳ ದಾವಾ ಸ್ವತ್ತಿನ ಉತ್ತರಕ್ಕೆ ನನ್ನ ದಾವಾ ಆಸ್ತಿಯು ಬರುತ್ತದೆ. ದಾವಾ ಶೆಡ್ಯೂಲ್ ಎ ಆಸ್ತಿಯು ಪ್ರತಿವಾದಿಗಳ ಆಸ್ತಿಯ ದಕ್ಷಿಣ ದಿಕ್ಕಿಗೆ ಬರುತ್ತದೆ.



5 ನ್ಯಾಯಾಲಯದಿಂದ ದಾವಾ ಆಸ್ತಿಗಳನ್ನು ಸರ್ವೇ ಮಾಡಿಕೊಡುವ ಸಲುವಾಗಿ ಈ ದಾವೆಯನ್ನು ನಾವು ಪ್ರತಿವಾದಿಗಳ ವಿರುದ್ಧ ದಾಖಲುಪಡಿಸಿರುತ್ತೇವೆ. ಸರ್ವೇ ಮಾಡುವ ಸಂಬಂಧ ನಾವು ತಹಶಿಲ್ದಾರ ಕಚೇರಿಗೆ ಯಾವುದೇ ಅರ್ಜಿಯನ್ನು ಕೊಟ್ಟಿರುವುದಿಲ್ಲ. ನಾವು

ದಾವಾ ಆಸ್ತಿಗಳ ಸರ್ವೇಗೆ ಸಂಬಂಧಿಸಿದಂತ ಪ್ರತಿವಾದಿಗಳನ್ನು ಭೇಟಿ ಮಾಡಿ ಕೇಳಿರುವುದಿಲ್ಲ. ಈಗೆ 5-6 ವರ್ಷಗಳ ಹಿಂದೆ ದಾವಾ ಆಸ್ತಿಗಳನ್ನು ಸರ್ವೇ ಮಾಡಿಸಬೇಕೆಂದು ವಿಚಾರ ಬಂದಿತ್ತು.

6. ನಮ್ಮ ಹೊಲದಿಂದ ಪ್ರತಿವಾದಿಗಳ ಹೊಲದಲ್ಲಿ ನಾವು ಹೋದರೆ ಹಾಗೂ ನಮ್ಮ ಜಮೀನಿನ ನೀರು ಅವರ ಜಮೀನಿನಲ್ಲಿ ಹೊದ್ದಲ್ಲಿ ಪ್ರತಿವಾದಿಗಳು ನಮ್ಮ ಜೊತೆ ಜಗಳವನ್ನು ಮಾಡಲು ಪ್ರಾರಂಭಿಸಿದರು. ನಾವು ಈ ಸಂಬಂಧ ಪೊಲೀಸ ಠಾಣೆಗೆ ದೂರನ್ನು ದಾಖಲಿಸಿದ್ದು ಹಿಂಬರಹವನ್ನು ಪಡೆದಿರುತ್ತವೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ. ಕಾರಣ ಸರ್ವೆ ಮಾಡಿಕೊಡುವಂತೆ ದಾವೆಯನ್ನು ದಾಖಲಿಸಲಾಗಿರುತ್ತದೆ. ನಮ್ಮ ಸ್ವತ್ತಿನ ಸ್ವಾಧೀನತೆಗೆ ಪ್ರತಿವಾದಿಗಳು ಯಾವುದೇ ಅಡ್ಡಿ ಆತಂಕವನ್ನು ಉಂಟುಪಡಿಸಿರುವುದಿಲ್ಲ.

7. ಪ್ರತಿವಾದಿಗಳ ಹೆಸರಿನಲ್ಲಿ ಬಿ ಶೆಡ್ಯೂಲ್ ದಾವಾ ಆಸ್ತಿಯಲ್ಲಿ ಒಟ್ಟು 12 ಎಕರೆ 34 ಗುಂಟೆ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಇಷ್ಟು ಆಸ್ತಿಗೆ ಸಂಬಂಧಿಸಿದಂತೆ ನಮೂನೆ 10 ರ ದಾಖಲಾತಿಯಾಗಿರುತ್ತದೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ನಮೂನೆ



10 ರ ದಾಖಲಾತಿಯನ್ನು ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಆಸ್ತಿಗೆಸಿ ಸಂಬಂಧಿಸಿದಂತೆ ಪ್ರತಿವಾದಿಗಳ ಹೆಸರಿನಲ್ಲಿ ನಮೂನೆ 10 ದಾಖಲಾತಿಯಾಗಿರುತ್ತದೆ ಎಂದರೆ ಸರಿಯಲ್ಲ, ಯಾವುದೇ ದಾಖಲಾತಿಗಳು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ದಾವಾ ಬಿ ಶೆಡೂಲ್ ಆಸ್ತಿಯ ಒಟ್ಟು 12 ಎಕರೆ 34 ಗುಂಟೆ ಸ್ವತ್ತಿನಲ್ಲಿ ಕಬ್ಜಾ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಬಿ ಶೆಡೂಲ್ ಆಸ್ತಿಯು ಪಹಣಿ ದಾಖಲಾತಿಯಲ್ಲಿ ಕಡಿಮೆ ತೋರಿಸಿದ್ದು ಕಾರಣ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಅವರ

ವಿರುದ್ಧ ಸುಳ್ಳು ದಾವೆ ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. 4 ರಿಂದ 10 ನೇ ವಾದಿಗಳು ಸಾಕ್ಷ್ಯವನ್ನು ನುಡಿಯಲು ಸಮರ್ಥರಿರುತ್ತಾರೆ. ನಾವು ಪ್ರತಿವಾದಿಗಳ ವಿರುದ್ಧ ವಿನಾಕಾರಣ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ಇಂದು ದಿನಾಂಕ06-01-2025 ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಕೊಪ್ಪಳ.**

ಪಿಡಬ್ಲ್ಯೂ-3
**ಹೆಸರುಃ ಚನ್ನಬಸಪ್ಪ ಮರಿಬಸಣ್ಣನವರ ಬಿನ್ ಮರಿಬಸಪ್ಪ ಮರಿಬಸಣ್ಣನವರ್**

ದಿಃ **06-01-2025** ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು ಃ ಪ್ರತಿವಾದಿಗಳ ಪರ ಶ್ರೀ ಐ.ಜಿ ವಕೀಲರಿಂದ**

1. ನಮ್ಮ ಮನೆತನದ ಮೂಲ ಪುರುಷ ಫಕೀರಪ್ಪ ಇವರ ಹೆಸರಿನಲ್ಲಿರುವ ದಾವಾ ಆಸ್ತಿಯ ಪಹಣಿ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ. ಫಕೀರಪ್ಪನವರಿಗೆ 4 ಜನ ಗಂಡು ಮಕ್ಕಳಿದ್ದು, ಹೆಣ್ಣು ಮಕ್ಕಳು ಇರುವುದಿಲ್ಲ ಎಂದರೆ ಸರಿ. ಫಕೀರಪ್ಪನವರ ಹೆಸರಿನಲ್ಲಿ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಮತ್ತು ಮನೆ ಇರುತ್ತದೆ ಎಂದರೆ ಸರಿ. ನಾನು 10-12 ವರ್ಷ ವಯಸ್ಸಿನವನಿದ್ದಾಗ ಫಕೀರಪ್ಪನವರು ಮೃತಪಟ್ಟಿರುತ್ತಾರೆ. ಫಕೀರಪ್ಪನವರ ಮರಣಾ ನಂತರ ನನ್ನ ತಂದೆ ಮತ್ತು ಆತನ ಅಣ್ಣ-ತಮ್ಮಂದಿರ ನಡುವೆ ಸುಮಾರು 30-40 ವರ್ಷಗಳ ಹಿಂದೆ ಮೌಖಿಕವಾಗಿ ಪಾಲುವಿಭಾಗವಾಗಿತ್ತು. ಆದರೆ ಯಾವ ದಿಕ್ಕಿಗೆ ಯಾರಿಗೆ ಹಿಸ್ಸೆ ಬರುತ್ತದೆ ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಸದರಿ ಪಾಲುವಿಭಾಗವಾದಾಗ ನನ್ನ ವಯಸ್ಸು 20 ವರ್ಷ ವಯಸ್ಸಾಗಿತ್ತು. ಆ ಪಾಲುವಿಭಾಗವಾದಾಗ ಇದ್ದಂತಹ ಜನರು ಈಗ ಮೃತಪಟ್ಟಿದ್ದು, ಅವರ ಹೆಸರನ್ನು ಹೇಳಲು ಈಗ ನೆನಪಿರುವುದಿಲ್ಲ.



ಪಿಡಬ್ಲ್ಯೂ-3
**ಹೆಸರುಃ ಚನ್ನಬಸಪ್ಪ ಮರಿಬಸಣ್ಣನವರ ಬಿನ್ ಮರಿಬಸಪ್ಪ ಮರಿಬಸಣ್ಣನವರ್**

2. ಫಕೀರಪ್ಪನವರು ಬಿಟ್ಟು ಹೋದಂತಹ ಆಸ್ತಿಗಳಲ್ಲಿ ಯಾವುದೇ ಆಸ್ತಿಗಳು ಇದುವರೆಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿ. ನನಗೆ ಓದಲು, ಬರೆಯಲು ಬರದ ಕಾರಣ

ಪ್ರತಿವಾದಿಗಳು ಹಾಜರುಪಡಿಸಿದಂತಹ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮೌಖಿಕವಾಗಿ ಆದಂತಹ ಪಾಲುವಿಭಾಗದಂತೆಯೇ ಆಯಾ ಆಯಾ ಸ್ವತ್ತುಗಳಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ತಂದೆಯ ಮರಣಾ ನಂತರ ನಮ್ಮ ಅಣ್ಣ-ತಮ್ಮಿಂದಿರ ನಡುವೆ ಪಾಲುವಿಭಾಗ ಆಗಿರುವುದಿಲ್ಲ. ಸಾಕ್ಷಿದಾರರು ಸ್ವಇಚ್ಛೆಯಿಂದ ಮುಂದುವರೆದು ನನ್ನ ತಂದೆಯ ಹೆಸರಿನಲ್ಲಿದ್ದ 7 ಎಕರೆ ಚಿಲ್ಲರೆ ದಾವಾ ಆಸ್ತಿ ಇರುತ್ತದೆ. ಸದರಿ ನನ್ನ ತಂದೆಯ ಹೆಸರಿನಲ್ಲಿ 7 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರತ್ಯೇಕ ಪಹಣಿ ಆಗಿರುವುದಿಲ್ಲ. ಅದೇ ರೀತಿ ನನ್ನ ತಂದೆಯ ಸಹೋದರರ ಹೆಸರಿನಲ್ಲಿಯೂ ಸಹ ಪ್ರತ್ಯೇಕವಾಗಿ ದಾವಾ ಆಸ್ತಿಯ ಪಹಣಿಗಳು ಆಗಿರುವುದಿಲ್ಲ. ಪ್ರಸ್ತುತ ನನ್ನ ತಂದೆಯ ಹೆಸರಿಗೆ ಬದ್ದಂತಹ ದಾವಾ ಆಸ್ತಿ ಪ್ರತ್ಯೇಕವಾಗಿ ಪೋಡಿ ಆಗಿರುತ್ತದೆ. ಆ ರೀತಿ ಒಟ್ಟು ಎರಡು ಪಹಣಿಗಳಲ್ಲಿ ಪ್ರತ್ಯೇಕವಾಗಿ ಪೋಡಿ ಆಗಿರುತ್ತದೆ. ಸರ್ವೇ ನಂಬರ 101/ಎ ಪಹಣಿಯ ಸ್ವತ್ತಿನ ಚೆಕ್ಕಬಂದಿಯೂ ಪೂರ್ವಕ್ಕೆ ದುರ್ಗಪ್ಪ ಚಲವಾಡಿ ರವರ ಸ್ವತ್ತು, ಪಶ್ಚಿಮಕ್ಕೆ ನನ್ನ ದೊಡ್ಡಪ್ಪನಾದ ಬಸಪ್ಪನವರ ಸ್ವತ್ತು, ಉತ್ತರಕ್ಕೆ ದೊಡ್ಡ ಬಸಪ್ಪ ಕಡಪ್ಪನವರ ಸ್ವತ್ತು ಮತ್ತು ದಕ್ಷಿಣಕ್ಕೆ ಶಿವರಾಮಪ್ಪ ತಿಗಡಿರವರ ಸ್ವತ್ತು ಇರುತ್ತದೆ. ಸರ್ವೇ ನಂಬರ 101/ಬಿ ಪಹಣಿಯ ಸ್ವತ್ತಿನ ಚೆಕ್ಕಬಂದಿಯೂ ಪೂರ್ವಕ್ಕೆ ಹನುಮಪ್ಪ ಹೊಸಕೇರಿ ರವರ ಸ್ವತ್ತು, ಪಶ್ಚಿಮಕ್ಕೆ ಫಕೀರಪ್ಪ ವಾಲಿಕಾರರವರ ಸ್ವತ್ತು, ಉತ್ತರಕ್ಕೆ ದೊಡ್ಡ ಬಸಪ್ಪ ಕಡಪ್ಪನವರ ಸ್ವತ್ತು ಮತ್ತು ದಕ್ಷಿಣಕ್ಕೆ ಶಿವರಾಮಪ್ಪ ತಿಗಡಿರವರ ಸ್ವತ್ತು ಇರುತ್ತದೆ. ಈ ಎರಡು ಸರ್ವೇ ನಂಬರಗಳ ಚೆಕ್ಕಬಂದಿಯನ್ನು ವಾದ ಪತ್ರದಲ್ಲಿ ತೋರಿಸಲಾಗಿರುತ್ತದೆ.



ಪಿಡಬ್ಲ್ಯೂ-3

**ಹೆಸರು: ಚನ್ನಬಸಪ್ಪ ಮರಿಬಸಣ್ಣನವರ ಬಿನ್ ಮರಿಬಸಪ್ಪ ಮರಿಬಸಣ್ಣನವರ್**

3. ದಾವಾ ಆಸ್ತಿಗಳನ್ನು ಹೊರತುಪಡಿಸಿ 1 ರಿಂದ 10 ನೇ ವಾದಿಗಳ ಹೆಸರಿನಲ್ಲಿ ಬೇರೆ ಒಟ್ಟು ಕುಟುಂಬದ ಆಸ್ತಿಗಳು ಇರುತ್ತವೆ. ಆ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಮತ್ತು ಅಲ್ಲವೋ ಎಂದು ಗೊತ್ತಿರುವುದಿಲ್ಲ. 1 ರಿಂದ 5 ನೇ ಪ್ರತಿವಾದಿಗಳ ಸ್ವತ್ತಿನ ಉತ್ತರ ದಿಕ್ಕಿಗೆ ಸುಮಾರು 3 ಎಕರೆ ಚಿಲ್ಲರೆ ದಾವಾ ಆಸ್ತಿ ಬರುತ್ತದೆ. ಸದರಿ ಉತ್ತರ ದಿಕ್ಕಿಗೆ ಇರುವಂತಹ 3 ಎಕರೆ ಚಿಲ್ಲರೆ ದಾವಾ ಆಸ್ತಿಯು ಹನುಮಪ್ಪ ಮತ್ತು ಆತನ ಅಣ್ಣನಾದ ಬಸಪ್ಪನ ಹೆಸರಿನಲ್ಲಿರುತ್ತದೆ.

4. ಈಗ್ಗೆ 5-6 ವರ್ಷಗಳ ಹಿಂದೆ ಪ್ರತಿವಾದಿಗಳು ದಾವಾ  ಸ್ವತ್ತಿನ ದಾವಾ ಆಸ್ತಿಗೆ ಅಡ್ಡಿ ಆತಂಕವನ್ನುಂಟುಪಡಿಸಿದರು. ಈ ಸಂಬಂಧ ನಾವು ಪೊಲೀಸ ಠಾಣೆಯಲ್ಲಿ ಪ್ರತಿವಾದಿಗಳ ವಿರುದ್ಧ ದೂರನ್ನು ದಾಖಲಿಸಿರುತ್ತೇವೆ. ಆ ದೂರಿನ ಹಿಂಬರಹವನ್ನು ಪೊಲೀಸ ಠಾಣೆಯಿಂದ ಪಡೆಯಲಾಗಿರುತ್ತದೆ ಹ ಾಗೂ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ.

5.  1 ರಿಂದ 5 ನೇ ಪ್ರತಿವಾದಿಗಳು ದಾವಾ ಬಿ ಶೇಡ್ಯೂಲ್ ನ 12 ಎಕರೆ 34 ಗುಂಟೆ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರುರು ಸ್ವ-ಇಚ್ಚೆಯಿಂದ ಮುಂದುವರೆದು ತಲಾ 4 ½ ಎಕರೆಯಂತೆ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂದು ನುಡಿಯುತ್ತಾರೆ.  ದಾವಾ ಬಿ ಶೇಡ್ಯೂಲ್ ನ 12 ಎಕರೆ 34 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಗಳ



ಹೆಸರಿನಲ್ಲಿ ನಮೂನೆ 10 ರ ಲ್ಲಿ ನಮೂದಾಗಿರುವ ಸಂಗತಿ ನನಗೆ ತಿಳಿದಿತ್ತು. ಸದರಿ ನಮೂನೆ 10 ರ ದಾಖಲಾತಿಗೆ ಸಂಬಂಧಿಸಿದಂತೆ ನಾನು ತಕರಾರನ್ನು ಸಲ್ಲಿಸಿದ್ದು, ಮೇಲ್ಮನವಿಯನ್ನು ಸಹಾ ದಾಖಲಾಗಿರತ್ತುದೆ. ಆ ಮೇಲ್ಮನವಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ. ಈಗ್ಗೆ 4-5 ವರ್ಷಗಳ ಹಿಂದೆ ಮೇಲ್ಮನವಿಯನ್ನು ಸಲ್ಲಿಸಲಾಗಿರುತ್ತದೆ.

6.  1 ರಿಂದ 5 ನೇ ಪ್ರತಿವಾದಿಗಳು ದಾವಾ ಬಿ ಶೇಡ್ಯೂಲ್ ನ 12 ಎಕರೆ 34 ಗುಂಟೆ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದು ಆದರೆ ಪಹಣಿ ದಾಖಲಾತಿಯಲ್ಲಿ ವಿಸ್ತೀರ್ಣವನ್ನು ಕಡಿಮೆ ತೋರಿಸಿದ ಕಾರಣ ಸದರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾವು ಪ್ರತಿವಾದಿಗಳ ವಿರುದ್ಧ ವಿನಾಕಾರಣ ಸುಳ್ಳು ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ದಾವಾ ಬಿ

ಶೇಡ್ಯೂಲ್ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ದಾವಾ ಎ ಶೇಡ್ಯೂಲ್ ಆಸ್ತಿಯ ಚೆಕ್ಕಬಂದಿಯನ್ನು ವಾದಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ಇಂದು ದಿನಾಂಕ10-12-2024 ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಕೊಪ್ಪಳ.**